## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ದೀಪಾಂಜಲಿನಗರ, ವಾರ್ಡ್ ಸಂಖ್ಯೆ-158, ಪಾಲಿಕೆ ಸದಸ್ಯರ ಕಛೇರಿ, 8ನೇ ಮುಖ್ಯರಸ್ತೆ, ಆವಲಹಳ್ಳಿ ಬಿಡಿಎ ಬಡಾವಣೆ, (ಅಭಯ ಆಂಜನೇಯ ದೇವಸ್ಥಾನ ಹತ್ತಿರ) ಬೆಂಗಳೂರು-560 026

---

ಸಂಖ್ಯೆ: ಸ.ಕಾ.ನಿ.ಅ/ಗಾಳ/ಪಿಆರ್/ /22-23 ದಿನಾಂಕ:-21-05-2022

ವಾರ್ಡ್ ಸಂಖ್ಯೆ : 158 ವಾರ್ಡ್ ಸಭೆಯ ನಡವಳಿ

**ಸಭೆಗೆ ಹಾಜರಾಗಿ ಭಾಗವಹಿಸಿದ ಸದಸ್ಯರು ಮತ್ತು ಸಾರ್ವಜನಿಕರ ವಿವರ:**

| ಕ್ರಮ ಸಂಖ್ಯೆ | ಅಧಿಕಾರಿಗಳು ಮತ್ತು ಸದಸ್ಯರುಗಳ ಹೆಸರು | ಪದನಾಮ/ಅಧ್ಯಕ್ಷರು | ಹಾಜರಾತಿ |
|---|---|---|---|
| 1 | ಶ್ರೀ. ಜಯಶಂಕರ್ | ನೋಡೇಲ್ ಅಧಿಕಾರಿ | ಹಾಜರಾಗಿರುತ್ತಾರೆ |
| 2 | ಶ್ರೀಮತಿ. ಚೈತ್ರ .ಜಿ.ಎಸ್. | ಕಾರ್ಯದರ್ಶಿ | ಹಾಜರಾಗಿರುತ್ತಾರೆ |
| 3 | ಶ್ರೀ. ನಾಗರಾಜು | ಸಂಚಾರಿ ಪೋಲೀಸ್ | ಹಾಜರಾಗಿರುತ್ತಾರೆ |
| 4 | ಶ್ರೀ. ಹೆಚ್. ಮಂಜುನಾಥ್ | ಕಿರಿಯ ಆರೋಗ್ಯ ಪರಿವೀಕ್ಷಕರು | ಹಾಜರಾಗಿರುತ್ತಾರೆ |
| 5 | ಶ್ರೀ. ಚಂದ್ರಶೇಖರ್ | ಬೆಸ್ಕಾಂ | ಹಾಜರಾಗಿರುತ್ತಾರೆ |
| 6 | ಶ್ರೀ. ಹೇಮಂತ್ ಕುಮಾರ್ .ಕೆ.ಹೆಚ್. | ಹಿರಿಯ ಆರೋಗ್ಯ ಪರಿವೀಕ್ಷಕರು | ಹಾಜರಾಗಿರುತ್ತಾರೆ |
| 7 | ಶ್ರೀಮತಿ. ಉಷಾ .ಸಿ.ಆರ್. | ಬಿ.ಡಬ್ಲ್ಯೂ.ಎಸ್.ಎಸ್.ಬಿ. | ಹಾಜರಾಗಿರುತ್ತಾರೆ |
| 8 | ಶ್ರೀ. ಅಭಿಲಾಶ್ .ಎನ್. | ಕಂದಾಯ ಇಲಾಖೆ | ಹಾಜರಾಗಿರುತ್ತಾರೆ |

**ಸಭೆಗೆ ಹಾಜರಿದ್ದ ಸಾರ್ವಜನಿಕರು**

1. ಶ್ರೀ. ರಾಜು
2. ಶ್ರೀಮತಿ. ಗಿರಿಜಮ್ಮ
3. ಶ್ರೀಮತಿ. ರಾಜೇಶ್ವರಿ
4. ಶ್ರೀ. ಕುಮಾರ್ .ಎಸ್.
5. ಶ್ರೀ. ಎಲ್. ಕೃಷ್ಣಪ್ಪ
6. ಶ್ರೀಮತಿ. ವತ್ಸಲ .ಪಿ.

ಸಮಿತಿಯ ಕಾರ್ಯದರ್ಶಿಯವರು ಹಾಜರಿದ್ದ ಎಲ್ಲಾ ಅಧಿಕಾರಿಗಳು, ಸಿಬ್ಬಂದಿ ವರ್ಗದವರು ಮತ್ತು ಸದಸ್ಯರುಗಳಿಗೆ ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ಸ್ವಾಗತ ಕೋರಿದ ನಂತರ ಸಭೆಯನ್ನು ಆರಂಭಿಸಲಾಯಿತು.

ಈ ಹಿಂದಿನ ಸಭೆಯಲ್ಲಿ ಬಂದಿದ್ದ ದೂರುಗಳ ಮೇಲೆ ಕೈಗೊಂಡಿರುವ ಕ್ರಮಗಳ ಬಗ್ಗೆ ಚರ್ಚಿಸುತ್ತ ಪ್ರಸ್ತುತ ಕುಂದು ಕೊರತೆಗಳ ಬಗ್ಗೆ ಚರ್ಚೆ ಪ್ರಾರಂಭಿಸಲಾಯಿತು.

ಬಿ.ಹೆಚ್.ಇ.ಎಲ್. ಮತ್ತು ಕೆ.ಎಸ್.ಆರ್.ಟಿ.ಸಿ. ಡಿಪೋ ಹತ್ತಿರ ಮರ ಬೆಳೆದುಕೊಂಡು ಬೀದಿ ದೀಪದ ಬೆಳಕು ಸರಿಯಾಗಿ ಕಾಣುತ್ತಿಲ್ಲ ಮರವನ್ನು ಕಟಾವು ಮಾಡುವಂತೆ ಟ್ರಾಫಿಕ್ ಪೋಲೀಸ್ ಇನ್ಸ್‌ಫಕ್ಟರ್ ತಿಳಿಸಿದರು. ಸಂಬಂಧಪಟ್ಟ ಅಧಿಕಾರಿಗಳಿಗೆ ಮರವನ್ನು ತೆರವುಗೊಳಿಸುವಂತೆ ಕ್ರಮವನ್ನು ಕೈಗೊಳ್ಳಲಾಗುವುದು ಎಂದು ನೋಡೆಲ್ ಅಧಿಕಾರಿ ರವರು ತಿಳಿಸಿದರು.

**ಕ್ರಮ : ಅರಣ್ಯ ಇಲಾಖೆ**

ಮೈಸೂರು ರಸ್ತೆ ಬಿ.ಹೆಚ್.ಇ.ಎಲ್. ಹತ್ತಿರ ಬೀದಿ ದೀಪದ ತೊಂದರೆ ಇದ್ದು ಸರಿಪಡಿಸುವಂತೆ ತಿಳಿಸಿದರು. ಸದರಿ ವಿಷಯದ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಕ್ರಮವನ್ನು ಕೈಗೊಳ್ಳಲು ತಿಳಿಸಲಾಗುವುದು ಎಂದು ನೋಡೆಲ್ ಅಧಿಕಾರಿ ರವರು ತಿಳಿಸಿದರು.

**ಕ್ರಮ : ಬೀದಿ ದೀಪಗಳ ಇಲಾಖೆ**

ಈರಣ್ಣಗುಡ್ಡೆಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ. ರವರು ರಸ್ತೆ ಅಗೆದಿದ್ದು ಅದನ್ನು ಸರಿಪಡಿಸುವಂತೆ ಸ್ಥಳೀಯ ಸಾರ್ವಜನಿಕರು ಸಭೆಯಲ್ಲಿ ತಿಳಿಸಿದರು. ಸದರಿ ವಿಷಯದ ಬಗ್ಗೆ ಸಭೆಯಲ್ಲಿ ಹಾಜರಿದ್ದ ಶ್ರೀಮತಿ. ಉಷಾ, ಸಹಾಯಕ ಅಭಿಯಂತರರವರು ಕ್ರಮವನ್ನು ಕೈಗೊಳ್ಳುವುದಾಗಿ ತಿಳಿಸಿದರು.

**ಕ್ರಮ : ಬಿ.ಡಬ್ಲ್ಯೂ.ಎಸ್.ಎಸ್.ಬಿ. ಇಲಾಖೆ**

ಬೆಸ್ಕಾಂ ಇಲಾಖೆಯವರು ಮರಗಳನ್ನು ಕಟಾವು ಮಾಡಿ ಅಲ್ಲಿಯೇ ಬಿಸಾಡಿ ಹೋಗಿರುವುದು ಕಂಡುಬಂದಿದ್ದು ಅದನ್ನು ಬೆಸ್ಕಾಂ ಇಲಾಖೆಯವರು ತೆರವುಗೊಳಿಸುವಂತೆ ತಿಳಿಸಿದರು. ಸದರಿ ವಿಷಯದ ಬಗ್ಗೆ ಕ್ರಮವನ್ನು ಕೈಗೊಳ್ಳುವುದಾಗಿ ನೋಡೆಲ್ ಅಧಿಕಾರಿ ರವರು ತಿಳಿಸಿದರು.

**ಕ್ರಮ : ಬೆಸ್ಕಾಂ ಇಲಾಖೆ**

ಪೌರ ಕಾರ್ಮಿಕರಿಗೆ ಮಸ್ಟರಿಂಗ್ ಸ್ಥಳ ಇಲ್ಲದಿರುವುದರಿಂದ ಕಾರ್ಮಿಕರಿಗೆ ಶೌಚಾಲಯದ ವ್ಯವಸ್ಥೆ ಮತ್ತು ಬಟ್ಟೆಗಳನ್ನು ಬದಲಾಯಿಸಿಕೊಳ್ಳಲು ಬಿ.ಬಿ.ಎಂ.ಪಿ. ಕಟ್ಟಡಗಳು ಖಾಲಿ ಇದ್ದರೆ ಅದನ್ನು ನೀಡುವಂತೆ ಹಾಗು ಪೌರ ಕಾರ್ಮಿಕರಿಗೆ ಮಾಸ್ಟರ್ ಚೆಕಪ್ ಬಗ್ಗೆ ಆಸ್ಪತ್ರೆಗಳಿಗೆ ಭೇಟಿ ನೀಡಿ ಮಾತನಾಡಿ ಕಾರ್ಮಿಕರಿಗೆ ಆರೋಗ್ಯ ತಪಾಸಣೆ ಮಾಡುವಂತೆ ಕೋರಿದರು. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಕ್ರಮವನ್ನು ಕೈಗೊಳ್ಳುವುದಾಗಿ ನೋಡೆಲ್ ಅಧಿಕಾರಿ ರವರು ತಿಳಿಸಿದರು.

**ಕ್ರಮ : ಘನತ್ಯಾಜ್ಯ ನಿರ್ವಹಣೆ ಕೊಶ**

ಸಭೆಯನ್ನು ಕಾರ್ಯದರ್ಶಿಗಳಾದ ಶ್ರೀಮತಿ. ಚೈತ್ರ .ಜಿ.ಎಸ್. ರವರು ವಂದನಾರ್ಪಣೆಯೊಂದಿಗೆ ಮುಕ್ತಾಯ ಮಾಡಿದರು.

ಕಾರ್ಯದರ್ಶಿ

ವಾರ್ಡ್ ಸಂಖ್ಯೆ : 158 (ದೀಪಾಂಜಲಿನಗರ)

**ಪ್ರತಿಯನ್ನು:-**

1. ಮಾನ್ಯ ಆಯುಕ್ತರ ಆಪ್ತ ಸಹಾಯಕರಿಗೆ ಕಳುಹಿಸುತ್ತಾ ಮಾನ್ಯ ಆಯುಕ್ತರ ಗಮನಕ್ಕೆ ತರುವಂತೆ ಕೋರಿದೆ.
2. ವಿಶೇಷ ಆಯುಕ್ತರು ಆಡಳಿತ ರವರ ಅವಗಾಹನೆಗೆ ಸಲ್ಲಿಸಿದೆ.
3. ಜಂಟಿ ಆಯುಕ್ತರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
4. ಅಧ್ಯಕ್ಷರು ಹಾಗೂ ನೋಡೆಲ್ ಅಧಿಕಾರಿಗಳು ರವರ ಅವಗಾಹನೆಗೆ ಸಲ್ಲಿಸಿದೆ.